# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 927
ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾಗಿದ ದಿನಾಂಕ : 27.12.2022
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ನಗರದಲ್ಲಿ ಕಳೆದ 3 ವರ್ಷಗಳಿಂದ ನಗರಾಭಿವೃದ್ಧಿ ಇಲಾಖೆಯ ಪುರಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ-3ರಲ್ಲಿ Purchase of Electric Two Wheeler Vehicle for Hassan, CMC under Amruth Nagarothana Phase-3 Project DMA/2022-23/IND 114274/ CALL-2 ಖರೀದಿಗೆ ಮಂಜೂರಾಗಿರುವ ಅನುದಾನ ಎಷ್ಟು; (ವಿವರ ನೀಡುವುದು) | ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ಯಾವುದೇ ವಾಹನ ಖರೀದಿ ಕಾಮಗಾರಿ ಮಂಜೂರಾಗಿರುವುದಿಲ್ಲ.<br>ಆದರೆ, ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ಸರ್ಕಾರದ ಆದೇಶ ಸಂಖ್ಯೆ: ನಅಇ/ 52/ ಐ.ಎಸ್.ಟಿ./ 2022/ ದಿನಾಂಕ:11-04-2022 ರನ್ವಯ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಪೌರ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮದಡಿ ಹಾಸನ ನಗರಸಭೆಯಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾರ್ಯದಲ್ಲಿ ತೊಡಗಿರುವ ಖಾಯಂ/ ಹೊರಗುತ್ತಿಗೆ ಪೌರ ಕಾರ್ಮಿಕರು/ ಲೋಡರ್ಸ್ ಡ್ರೈವರ್ಸ್ ಸಫಾಯಿ ಕರ್ಮಚಾರಿ, ಸ್ಕ್ಯಾವೆಂಜರ್ಸ್ ಗಳಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ಖರೀದಿಸಿ ವಿತರಿಸಲು ರೂ.97.50 ಮತ್ತು ರೂ.32.50 ಲಕ್ಷಗಳು, ಒಟ್ಟಾರೆ ರೂ.130.00 ಲಕ್ಷಗಳು ಮಂಜೂರಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ಈ ಯೋಜನೆಗೆ ಸರ್ಕಾರದ ಆದೇಶದಂತೆ ಸಕ್ಷಮ ಇಲಾಖೆಯಿಂದ ದರಗಳಿಗೆ ಡಾಟಾ ರೇಟ್ ಅನುಮೋದನೆ ಪಡೆಯಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ Purchase of Electric two wheeler vehicle for Hassan CMC under Amrutha Nagarothana (Municipality) Phase-4 Project DMA/ 2022-23/ IND/ 14274/ Call-2 ಕೆಲಸದ ಅಡಿಯಲ್ಲಿ ಖರೀದಿಸುತ್ತಿರುವ ವಾಹನಗಳಿಗೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳ ಕಛೇರಿ ಕಡತ ಸಂಖ್ಯೆ: ಮುನಿಸಿ(2)/ ಸಿಆರ್/ 48/ 2022-23ರಲ್ಲಿ ಸದರಿ ವಾಹನಗಳನ್ನು ಖರೀದಿಸುವ ಬಗ್ಗೆ ದರಪಟ್ಟಿಯನ್ನು ಆಹ್ವಾನಿಸಿ, ದರ ಮಂಜೂರಾತಿ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಕಡತ ಮಂಡಿಸಿದ್ದು, ಜಿಲ್ಲಾಧಿಕಾರಿಯವರು ನೇರವಾಗಿ ಟೆಂಡರ್ ಕರೆಯಲು ದಿನಾಂಕ:30-05-2022 ರಂದು ಆದೇಶಿಸಿರುತ್ತಾರೆ. ಅದರಂತೆ ಟೆಂಡರ್ ಕರೆಯಲಾಗಿರುತ್ತದೆ. |
| ಇ) | ಹಾಗಿದ್ದಲ್ಲಿ ಸರ್ಕಾರದ ಆದೇಶದ ಪ್ರಕಾರ ಟೆಂಡರ್ ಕರೆಯಲು ಗುತ್ತಿಗೆ ದಾರರ ವಾರ್ಷಿಕ ವಹಿವಾಟಿನ ಪ್ರಮಾಣ ಎಷ್ಟು: ಗುತ್ತಿಗೆದಾರರ ಲೈನ್ ಆಫ್ ಕ್ರೆಡಿಟ್ ಪ್ರಮಾಣ ಎಷ್ಟು: (ವಿವರ ನೀಡುವುದು) | |
| ಈ) | ಹಾಗಿದ್ದಲ್ಲಿ, ಗುತ್ತಿಗೆದಾರರ ಅರ್ಹತೆಯ ಕೆಲಸವು ಸರಬರಾಜಿಗೆ ಸಂಬಂಧವಾಗಿರುವುದರಿಂದ ಕೆಲಸದ ಟೆಂಡರ್, ಖರೀದಿಸುವ ಒಟ್ಟು ವಾಹನಗಳ ಸಂಖ್ಯೆಯಲ್ಲಿ ಶೇಕಡಾ 80%ರಷ್ಟು ವಾಹನಗಳನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗೆ ಸರಬರಾಜು ಮಾಡಿರುವ ದೃಢೀಕರಣವನ್ನು ಕೇಳಬೇಕಾಗಿರುತ್ತದೆ. ಈ ನಿಯಮವನ್ನು ಗಾಳಿಗೆ ತೂರಿ ಟೆಂಡರ್ ಮೊತ್ತ ರೂ.130.00 ಲಕ್ಷಕ್ಕೆ ಶೇಕಡಾ 50% ರಷ್ಟು ರೂ.65.00 ಲಕ್ಷಗಳ ಮೊತ್ತಕ್ಕೆ ವಾಹನ ಸರಬರಾಜು | ಸರ್ಕಾರದ ಆದೇಶ ಸಂಖ್ಯೆ: FD/ 9/ PCL/ 2004 ದಿನಾಂಕ:06-08-2005 ಪ್ರಕಾರ ಸಿವಿಲ್ ಕಾಮಗಾರಿಗಳಿಗೆ ಕರ್ನಾಟಕ ವರ್ಕ್ಸ್ (ಕೆ.ಡಬ್ಲ್ಯೂ), ಸರಕುಗಳ ಖರೀದಿಗೆ ಕರ್ನಾಟಕ ಗೂಡ್ಸ್ (ಕೆ.ಜಿ), ಸೇವೆಗಳನ್ನು ಪಡೆಯಲು ಕರ್ನಾಟಕ ಸರ್ವೀಸ್ (ಕೆ.ಸಿ) ಪ್ರತ್ಯೇಕವಾದ ಟೆಂಡರ್ ದಸ್ತಾವೇಜುಗಳನ್ನು ನಿಗಧಿಪಡಿಸಿದೆ. ಸದರಿ ವಾಹನಗಳನ್ನು ಕರ್ನಾಟಕ ಸರಕುಗಳು (ಕೆ.ಜಿ) ಟೆಂಡರ್ ದಸ್ತಾವೇಜು ಉಪಯೋಗಿಸಿ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ದಸ್ತಾವೇಜು ಪ್ರಕಾರ ಯಾವುದೇ ಟರ್ನ್ ಓವರ್ ಹಾಗೂ ಲೈನ್ ಆಫ್ ಕ್ರೆಡಿಟ್ ಪ್ರಮಾಣವನ್ನು ನಿಗಧಿಪಡಿಸುವುದು ಕಡ್ಡಾಯವಾಗಿರುವುದಿಲ್ಲ. ಹಾಲಿ ಸರಬರಾಜುದಾರರು ಅನುಮೋದಿಸಿರುವ ದರಗಳು ಅಧಿಕವಾಗಿದ್ದುದರಿಂದ ಸದರಿ ಟೆಂಡರ್‌ಗಳನ್ನು ರದ್ದುಪಡಿಸಿ ಮರು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | ಮಾಡಿರುವ ದೃಢೀಕರಣ ಮಾಡಿರುವುದು ನಿಜವೇ; ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು; | |
| ಉ) | Purchase of Electric Two Wheeler Vehicle for Hassan, CMC under Amruth Nagarothana Phase-3 Project DMA/2022-23/IND 114274/ CALL-2 ಕೆಲಸದಲ್ಲಿ ರೂ.130.00 ಲಕ್ಷಕ್ಕೆ ಸರ್ಕಾರದ ಆದೇಶದಂತೆ ಘಟನೋತ್ತರ ಮಂಜೂರಾತಿ ಪಡೆಯಲಾಗಿದೆಯೇ? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ನಅಇ/184/ಎಂ.ಎನ್.ಇ./2015 ದಿನಾಂಕ:11-11-2016ರ ಪ್ರಕಾರ ಜಿಲ್ಲಾಧಿಕಾರಿಗಳಿಗೆ ರೂ.5.00 ಕೋಟಿವರೆಗಿನ ಮೊತ್ತದ ಕಾಮಗಾರಿ / ಸರಕುಗಳು/ ಸೇವೆಗಳನ್ನು ಪಡೆಯಲು ಅವಕಾಶವಿದ್ದು, ಘಟನೋತ್ತರ ಮಂಜೂರಾತಿ ಪಡೆಯುವ ಅವಶ್ಯಕತೆಯಿರುವುದಿಲ್ಲ. |

ಕಡತ ಸಂಖ್ಯೆ:ನ ಅಇ 198 ಸಮಸ 2022

(ಎನ್. ನಾಗರಾಜ (ಎಂ.ಟಿ.ಬಿ.))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು